

ವ್ಯಾಂಕೋವರ್ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ನಾರ್ವೆ ಐಸ್ ಹಾಕಿ ತಂಡದವರು ಹಾಕಿಕೊಂಡ ಉಡುಪಿಗೆ ಸ್ವತಃ ನಾರ್ವೆ ದೊರೆಯೇ ಮನಸೋತಿದ್ದಾನೆಂದರೆ ಇದು ಸಾಮಾನ್ಯರ ಕ್ರೇಜ್ ಆಗುವುದರಲ್ಲಿ ಸಂಶಯವಿಲ್ಲ. ದೊರೆ ಎರಡೆರಡು ಜೊತೆ ಈ ರಂಗುರಂಗಿನ ಪೈಜಾಮಾ ಖರೀದಿಸಿದ್ದಾನಂತೆ. ಧರಿಸಿಕೊಂಡು ಹೋಗುವುದೆಲ್ಲಿಗೆ ಎಂಬ ಐಡಿಯಾ ಇನ್ನೂ ಬಂದಿಲ್ಲವಂತೆ.

ಕೊಲಂಬಿಯಾದ ಈ ಸಾಕು ಬೆಕ್ಕಿಗೆ ತಾಯಿಯಿಲ್ಲದ ಅಳಿಲು ಮರಿಗೆ ಹಾಲುಣಿಸುವ ಮಮತೆ. ಆದರೆ ಬೆಕ್ಕಿನ ಮರಿಗೆಷ್ಟು ಈರ್ಷ್ಯೆ ನೋಡಿ. 'ನನ್ನ ಹಾಲಿನಲ್ಲಿ ಪಾಲು ಕೇಳುತ್ತೀಯಾ?' ಎಂದು ಕಾಲು ಹಿಡಿದು ಎಳೆಯಲು ಯತ್ನಿಸುತ್ತಿದೆ.



ಬೇಡದ ಸಂಬಂಧದಿಂದ ಕಿರಿಕಿರಿಯಾ? ಹಾಗಾದರೆ ಅದನ್ನು ಶೌಚಾಲಯದಲ್ಲಿ ಹಾಕಿ ಬಕೆಟ್ ನೀರನ್ನು ಚೆಲ್ಲಿಬಿಡಿ. ಆದರೆ ಈ ಸುವರ್ಣಾವಕಾಶ ಇರುವುದು ಜಪಾನಿಯರಿಗೆ ಮಾತ್ರ. ಅಲ್ಲಿಯ ಮಂಟೊಕುಜಿ ಪೂಜಾಸ್ಥಳದಲ್ಲಿ ಇಂಥದ್ದೊಂದು ಸಂಪ್ರದಾಯ ಬಹು ಹಿಂದಿನಿಂದ ನಡೆದುಕೊಂಡು ಬಂದಿತ್ತು. ಒಲ್ಲದ ಗಂಡನನ್ನು ಬಿಡಬೇಕಾದರೆ ಆತನ ಹೆಸರು ಬರೆದ ಚೀಟಿಯನ್ನು ಅಲ್ಲಿಯ ಶೌಚಾಲಯದಲ್ಲಿ ಹಾಕಿ ಬಕೆಟ್ ನೀರು ಸುರಿದರೆ ಸಾಕು, ಸಂಬಂಧ ಕಟ್. ಆದರೆ ಈಗ ಕೋರ್ಟು, ವಕೀಲರು ಬಂದ ಮೇಲೆ ಶೌಚಾಲಯಕ್ಕೇನು ಕೆಲಸ? ಅದಕ್ಕೇ ಮಾಡಿದ ಪಾಪ ತೊಳೆದುಕೊಳ್ಳಲು ಈ ಶೌಚಾಲಯ ಬಳಕೆಯಾಗುತ್ತಿದೆಯಂತೆ.

ಚಿನ್ನದ ತಗಡು ಬಡಿದ ಶವಪೆಟ್ಟಿಗೆ. ಇಟಲಿಯಲ್ಲಿ ತಯಾರಾದ ಇದರ ಬೆಲೆ 2.8 ಲಕ್ಷ ಯೂರೋ. ಜೊತೆಗೆ ಹೊರಗಿದ್ದವರನ್ನು ಬಡಿದೆಬ್ಬಿಸಲು 54 ಭಾಷೆಗಳಲ್ಲಿ ದನಿ ಎಸ್‌ಒಎಸ್. ಶವಕ್ಯಾಕೆ ಇಂಥ ಎಲೆಕ್ಟ್ರಾನಿಕ್ ವ್ಯವಸ್ಥೆ? ಸತ್ತಿದ್ದಾನೆ ಎಂದು ಜೀವಂತ ಇದ್ದವನನ್ನು ಪೆಟ್ಟಿಗೆ ತುಂಬಿದಾಗ ಬಳಸಬಹುದು.





ಗಿನ್ನೆಸ್ ಶಬ್ದವೂ ಗೊತ್ತಿಲ್ಲದಿದ್ದ ವಿಯೆಟ್ನಾಮಿನ ಈ ನೀಳಕೇಶಿ ಸತ್ತ ಮೇಲೆ ಗೊತ್ತಾಯ್ತಂತೆ ಕೂದಲಿನ ಉದ್ದವನ್ನು ಪುಸ್ತಕದಲ್ಲಿ ಸೇರಿಸಿ ಅಮರನನ್ನಾಗಿಸಬಹುದಿತ್ತು ಎಂದು. ಹೆಬ್ಬಾವಿನ ಥರ ಹೆಗಲ ಮೇಲೆ 22 ಅಡಿ ಉದ್ದದ ಬಾಚದ, ತೊಳೆಯದ ಕೂದಲನ್ನು ಹೊತ್ತು ಓಡಾಡುತ್ತಿದ್ದ ಟ್ರ್ಯಾನ್‌ವ್ಯಾನ್ ಬದುಕಿದ್ದಾಗ ಕೂದಲಿನ ಉದ್ದ ಅಳೆಯಲು ಸಾಧ್ಯವಾಗಲಿಲ್ಲ. ಅಳೆಯಬೇಕು ಎನ್ನಿಸಿರಲಿಲ್ಲವೋ ಅಥವಾ ತೊಳೆಯದ ಕೂದಲು ಸಮೀಪ ಸುಳಿಯಲು ಬಿಡಲಿಲ್ಲವೋ!

ಬದುಕಿನಲ್ಲಿ ರೋಮಾಂಚನವೇ ಇಲ್ಲ ಎನ್ನುವ ಥ್ರಿಲ್‌ಪ್ರಿಯರು ಫ್ರಾನ್ಸ್‌ಗೆ ಹೋಗಬಹುದು. 90 ಯೂರೋ ಕೊಟ್ಟರಾಯ್ತು. ಹೊಸ ಥ್ರಿಲ್ ಪ್ಯಾಕೇಜ್ ಸಿಗುತ್ತದೆ. ಅಪಹರಣಕಾರರು ಬಂದು ಅಪಹರಿಸಿಕೊಂಡು ಹೋಗುತ್ತಾರೆ. ಕೈಕಾಲು ಕಟ್ಟಿ ನಾಲ್ಕು ತಾಸು ಮೂಟೆಯಂತೆ ಬಿಸಾಕುತ್ತಾರೆ. ಜಾಸ್ತಿ ದುಡ್ಡು ಕೊಟ್ಟರೆ ಹೆಲಿಕಾಪ್ಟರ್ ಮೂಲಕ ಪರಾರಿಯಾಗುವ ಪ್ಯಾಕೇಜ್ ಕೂಡಾ ಲಭ್ಯ. ಸದ್ಯಕ್ಕೆ ಸಾವಿನ ಪ್ಯಾಕೇಜ್ ಲಭ್ಯವಿಲ್ಲ.

ಇದ್ಯಾವ ಹೊಸ ಕಲೆ? ಸಿಗರೇಟ್ ಪ್ರಿಯರು ಚಕ್ಕನೆ ಹೇಳಿಯಾರು. ಹವಾನಾದ ಸಿಗರೇಟ್‌ಗಳನ್ನು ಜೋಡಿಸಿ ಮೆತ್ತನೆಯ ಸೋಫಾದ ಕಲಾಕೃತಿ ಧೂಮ ಏಳಿಸಲು ಸಿದ್ಧವಾಗಿದೆ. ಅಲ್ಲೀಗ ವಾರ್ಷಿಕ ಸಿಗರೇಟ್ ಉತ್ಸವದ ಸಂಭ್ರಮ. ಪ್ಯಾಕ್ ಸಿಗರೇಟ್ ಕೊಂಡವರಿಗೆ ಗ್ಲಾಸ್ ಮದ್ಯ ಉಚಿತವಂತೆ. ಜೊತೆಗೆ ಮಾನಿನಿಯರ ಸೇವೆಯೂ ಉಚಿತ ಎಂದು ಇನ್ನೊಂದು ಕಂಪೆನಿ ಘೋಷಿಸಿದೆ.



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65